## ಮೊದಲ ಆದ್ಯತೆ

ಕಂಪನಿಯೊಂದರ ಸಂದರ್ಶನಕ್ಕೆ ಬಂದಿದ್ದ ರಮಣ್‌ಗೆ ಸಂದರ್ಶಕರು ಕೇಳಿದರು, 'ನಮ್ಮ ಕಂಪನಿಯಲ್ಲಿ ಎರಡನೇ ಆದ್ಯತೆ ಶುಚಿತ್ವ ಹಾಗೂ ನೈರ್ಮಲ್ಯಕ್ಕೆ. ಆಚೆಯಿಂದ ಬರುವಾಗ ಬಾಗಿಲಿನಲ್ಲಿ ಒಂದು ಕಾಲೊರಸು ಇದೆ ನೋಡಿದಿರಾ?' ಎಂದು. ರಮಣ್ ತಕ್ಷಣವೇ 'ಹೌದು ಸಾರ್, ಅದರಲ್ಲಿ ಚೆನ್ನಾಗಿ ಕಾಲೊರೊಸಿಕೊಂಡೇ ಒಳಗೆ ಬಂದೆ' ಎಂದ. ಆಗ ನಿರ್ದೇಶಕ, 'ನಮ್ಮ ಕಂಪನಿಯ ಮೊದಲ ಆದ್ಯತೆ ಸತ್ಯಕ್ಕೆ, ಅಲ್ಲಿ ಯಾವುದೇ ಕಾಲೊರಸು ಇಲ್ಲ, ಇನ್ನು ನೀವು ಹೊರಡಬಹುದು' ಎಂದಾಗ, ರಮಣ್ ಇಂಗು ತಿಂದ ಮಂಗನಂತಾಗಿ ತಲೆ ತಗ್ಗಿಸಿ ಹೊರಗೆ ಬಂದ.

**ಅರ್ಚನಾ ವಿ. ರಾವ್**





## ಬಿಟ್ಟಿ ಸಲಹೆ

ಚೆನ್ನೈ ಮೂಲದ ಒಂದು ಕುಟುಂಬ ಹಾಗೂ ಉತ್ತರ ಭಾರತದ ಒಂದು ಕುಟುಂಬ ರೈಲಿನ ಒಂದೇ ಬೋಗಿಯಲ್ಲಿ ಕಿಟಕಿಯ ಪಕ್ಕದ ಆಸನದಲ್ಲಿ ಎದುರುಬದುರು ಕುಳಿತು ಪ್ರಯಾಣ ಮಾಡುತ್ತಿದ್ದರು. ರಾತ್ರಿ ಮೂರು ಗಂಟೆಗೆ ಸೆಕೆ ತಾಳದೆ ಒಬ್ಬಾಕೆ ಕಿಟಕಿ ತೆರೆದಳು. ಆಗ ಎದುರಿನಾಕೆ, 'ಈ ಚಳಿಗೆ ನಾನು ಸತ್ತೇ ಹೋಗ್ತೀನಿ' ಎನ್ನುತ್ತ ಕಿಟಕಿ ಮುಚ್ಚಿದಳು. ಆಗ ಮತ್ತೊಬ್ಬಾಕೆ, 'ಈ ಸೆಕೆಗೆ ನನ್ನ ಉಸಿರೇ ನಿಂತು ಹೋಗುತ್ತೆ' ಎನ್ನುತ್ತ ಕಿಟಕಿ ತೆಗೆದಳು. ಎಷ್ಟು ಹೊತ್ತಾದರೂ ಇವರ ಜಗಳ ನಿಲ್ಲುವ ಲಕ್ಷಣವೇ ಕಾಣಲಿಲ್ಲ. ಬೋಗಿಯಲ್ಲಿದ್ದ ಇನ್ನೊಬ್ಬ ಪ್ರಯಾಣಿಕ ಒಂದು ಸಲಹೆ ನೀಡಿದ. 'ಮೊದಲು ಕಿಟಕಿ ತೆರೆಯಿರಿ, ಒಬ್ಬಾಕೆ ಚಳಿಗೆ ಸಾಯುತ್ತಾಳೆ. ಆಮೇಲೆ ಕಿಟಕಿ ಮುಚ್ಚಿ, ಇನ್ನೊಬ್ಬಾಕೆ ಸೆಕೆಗೆ ಸಾಯುತ್ತಾಳೆ. ಅಲ್ಲಿಗೇ ಜಗಳ ನಿಲ್ಲುತ್ತದೆ. ಉಳಿದವರು ನೆಮ್ಮದಿಯಿಂದ ಪ್ರಯಾಣ ಮುಂದುವರಿಸಬಹುದು.'

**ಕೆ.ಜಿ. ಭದ್ರಣ್ಣವರ**